ತೆರೆದ - ಅಂಚೆ

# ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ



## ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಪ್ರಸಾರಾಂಗದ ಸಂಯುಕ್ತಾಶ್ರಯದಲ್ಲಿ



ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ
125ನೆಯ ಜಯಂತ್ಯುತ್ಸವದ ಸವಿನೆನಪಿಗಾಗಿ
(ಯುಜಿಸಿ ಪ್ರಾಯೋಜಿತ)

# ಕನ್ನಡ ದಲಿತ ಸಾಹಿತ್ಯ ರಾಷ್ಟ್ರೀಯ ವಿಚಾರ ಸಂಕಿರಣ

ಹಾಗೂ

• ಚಿತ್ರಕಲಾ ಪ್ರದರ್ಶನ • ಪುಸ್ತಕ ಮಾರಾಟ ಮೇಳ

ದಿನಾಂಕ : 21.01.2017 ರಿಂದ 23.01.2017ರ ವರೆಗೆ, ಸಮಯ : 10.30 ಗಂಟೆಗೆ

ಇವರಿಗೆ,

____________________

____________________

____________________

ಸ್ಥಳ:
ಡಾ. ಬಿ.ಆರ್. ಅಂಬೇಡ್ಕರ್ ಭವನ
ಗುಲಬರ್ಗಾ ವಿಶ್ವವಿದ್ಯಾಲಯ,ಕಲಬುರಗಿ

**ತಮಗೆ ಆದರದ ಸ್ವಾಗತ**

**ಪ್ರೊ. ಎಚ್.ಟಿ. ಪೋತೆ**
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ
ನಿರ್ದೇಶಕರು, ಪ್ರಸಾರಾಂಗ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**ಪ್ರೊ. ಅಗಸರ್ ದಯಾನಂದ**
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

## ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಪ್ರಸಾರಾಂಗದ
ಸಂಯುಕ್ತಾಶ್ರಯದಲ್ಲಿ





ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ
125ನೆಯ ಜಯಂತ್ಯುತ್ಸವದ ಸವಿನೆನಪಿಗಾಗಿ
(ಯುಜಿಸಿ ಪ್ರಾಯೋಜಿತ)

# ಕನ್ನಡ ದಲಿತ ಸಾಹಿತ್ಯ ರಾಷ್ಟ್ರೀಯ ವಿಚಾರ ಸಂಕಿರಣ

ಹಾಗೂ

• ಚಿತ್ರಕಲಾ ಪ್ರದರ್ಶನ • ಪುಸ್ತಕ ಮಾರಾಟ ಮೇಳ

ಪುಸ್ತಕ ಮಾರಾಟ ಮೇಳದ ಪ್ರಾಯೋಜಕರು : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ದಿನಾಂಕ : 21.01.2017 ರಿಂದ 23.01.2017ರ ವರೆಗೆ
ಸಮಯ : 10.30 ಗಂಟೆಗೆ

ಸ್ಥಳ:
ಡಾ. ಬಿ.ಆರ್. ಅಂಬೇಡ್ಕರ್ ಭವನ
ಗುಲಬರ್ಗಾ ವಿಶ್ವವಿದ್ಯಾಲಯ,ಕಲಬುರಗಿ

**ತಮಗೆ ಆದರದ ಸ್ವಾಗತ**

**ಪ್ರೊ. ಎಚ್.ಟಿ. ಪೋತೆ**
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ
ನಿರ್ದೇಶಕರು, ಪ್ರಸಾರಾಂಗ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**ಪ್ರೊ. ಅಗಸರ್ ದಯಾನಂದ**
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

## ಬನ್ನಿ ನಾವೆಲ್ಲ ಹೋರಾಟದ ಸಾಗರಕ್ಕೆ ಉಪನದಿಗಳಾಗಿ ಸೇರೋಣ.....

ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 125ನೇಯ ಜಯಂತ್ಯುತ್ಸವದ ಅಂಗವಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ (ಯುಜಿಸಿ ನೆರವಿನಿಂದ) ಹಾಗೂ ಪ್ರಸಾರಾಂಗದ ಸಂಯುಕ್ತಾಶ್ರಯದಲ್ಲಿ 21, 22 ಹಾಗೂ 23 ಜನವರಿ 2017ರ ಮೂರು ದಿನಗಳ ಕಾಲ **ಕನ್ನಡ ದಲಿತ ಸಾಹಿತ್ಯ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಚಿತ್ರಕಲಾ ಪ್ರದರ್ಶನ, ಪುಸ್ತಕ ಮಾರಾಟ ಮೇಳ** ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕನ್ನಡ ದಲಿತ ಸಾಹಿತ್ಯಕ್ಕೆ ಅದರದೇ ಆದ ಪರಂಪರೆ ಇದೆ. ಸಾಮಾಜಿಕ ನ್ಯಾಯ, ಸ್ವಾಭಿಮಾನದ ನೆಲೆಯಲ್ಲಿ ದಲಿತ ಸಂಸ್ಕೃತಿ, ಚಿಂತನೆಯು ಅಕ್ಷರದ ಮೂಲಕ ಹಕ್ಕೊತ್ತಾಯದ ರೂಪ ಪಡೆದು, ಸಾವಿರ ವರ್ಷ ಇತಿಹಾಸವಿರುವ ಕನ್ನಡ ಸಾಹಿತ್ಯಕ್ಕೆ ಹೊಸನೆಲೆಯನ್ನು ಒದಗಿಸಿತು. ದಲಿತ ಚಳವಳಿಯ ಮೂಲಕ ರೂಪು ಪಡೆದ ಕನ್ನಡ ದಲಿತ ಸಾಹಿತ್ಯ ಕಾವ್ಯ, ಕಥೆ, ವಿಚಾರ, ವಿಮರ್ಶೆ ಆತ್ಮಕಥೆ ಈ ಮುಂತಾದ ಆಯಾಮಗಳಲ್ಲಿ ಸಮೃದ್ಧವಾಗಿ ಸ್ಫುರಿಸಿದೆ.

ಈ ಸ್ಫುರಣೆಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ, ಹೋರಾಟ ಹಾಗೂ ಚಿಂತನೆಗಳೇ ಪ್ರಧಾನ ಕಾರಣ–ಪ್ರೇರಣೆಯಾಗಿ ಒಲಿದುದು ಸರ್ವವಿದಿತವಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಎಂಬ ಜ್ಞಾನ ಸರೋವರದ ಜೊತೆಗೆ ಬುದ್ಧ, ಬಸವ, ಕಬೀರ, ಕನಕ, ಫುಲೆ, ಚೋಕಾಮೇಳ ಈ ಮುಂತಾದ ವ್ಯಕ್ತಿ ವಿಚಾರಗಳನ್ನು ಆಗು ಮಾಡಿಕೊಂಡ ದಲಿತ ಲೇಖಕರು, ರಾಜ್ಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಕೇಂದ್ರ, ರಾಜ್ಯ ಸಾಹಿತ್ಯ ಅಕಾಡೆಮಿಗಳು ಇವರ ಕೃತಿಗಳನ್ನು ಅನುಲಕ್ಷಿಸಿ ಗೌರವ ನೀಡುವುದರ ಮೂಲಕ ತಮ್ಮ ಗೌರವನ್ನು ಹೆಚ್ಚಿಸಿಕೊಂಡಿವೆ.

ಎಪ್ಪತ್ತರ ದಶಕದ ಪೂರ್ವದ ದಲಿತ ಸಾಹಿತ್ಯ ಢಾಳಾಗಿ ಕಾಣದಿದ್ದರೂ ದೇವರಾಯ ಇಂಗಳೆ, ಬಿ. ಶ್ಯಾಮಸುಂದರ್, ಜಿ. ವೆಂಕಟಯ್ಯ, ಸೋಸಲೆ ಸಿದ್ಧಪ್ಪ, ಕುಮಾರ ಕಕ್ಕಯ್ಯ ಪೋಳ, ಗೋವಿಂದ ದಾಸ ಈ ಮುಂತಾದವರು ಪ್ರಾದೇಶಿಕ ನೆಲೆಯಲ್ಲಿ ತಕ್ಕಮಟ್ಟಿಗೆ ಶ್ರಮಿಸಿದ್ದಾರೆ. ಆನಂತರದಲ್ಲಿ ನಡೆದದ್ದು ಚರಿತ್ರೆ, ಇಡೀ ಮಾನವ ಕುಲವನ್ನು ಮಾನವೀಕರಣಗೊಳಿಸುವಂತಹ ಅನುಭವದ ವಿಚಾರಗಳು ಸಾಗರೋಪಾದಿಯಲ್ಲಿ ಉಕ್ಕಿ ಹರಿದಿವೆ. ಹಾಗೆ ಹರಿಯುವ ಮೂಲಕ ಅನೇಕ ವಲಯದವರನ್ನು ಮನುಷ್ಯಮುಖಿಯಾಗಿಸುವಲ್ಲಿ ಶ್ರಮಿಸಿವೆ. ಆ ಮೂಲಕ ಸಮಾಜ ತನ್ನನ್ನು ತಾನು ಮೈಕೊಡವಿಕೊಂಡು ಸಹ್ಯವಲ್ಲದ ಸಾಮಾಜಿಕ ನೆಲೆಯ ಕೊಳೆಯನ್ನು ಇನ್ನಿಲ್ಲದಂತೆ ಮಾಡಲು ಶ್ರಮಿಸಿದೆ. ಆ ಅರಿವಿನ ಶ್ರಮದ ಫಲವಾಗಿ ನಮ್ಮಂತಹವರು ಕೇರಿ, ಗುಡ್ಡಗಾಡು ಬಿಟ್ಟು ಊರು, ನಗರ, ಮಹಾನಗರಗಳಲ್ಲಿ ವಾಸಮಾಡುವಂತಾದುದು ದಿಟವಾಗಿದೆ. ಶಿವಾಲಯ ಹಾಗೂ ಅಗ್ರಹಾರಗಳಲ್ಲೂ ಪ್ರವೇಶಿಸುವಂತಾಗಿ, ಎಲ್ಲರೊಂದಿಗೆ ಸಮಾನವಾಗಿ ಬದುಕುವಂತಾಗುತ್ತಲಿದೆ. ಸ್ವತಂತ್ರವಾಗಿ ಮಾತನಾಡುವ, ಸಮಾಜವನ್ನು ಮುನ್ನಡೆಸುವ ತಾಕತ್ತು ನಮ್ಮ ಸಂವಿಧಾನದ ಮೂಲಕ ದಕ್ಕುವಂತಾಗಿದ್ದರೂ ಅಪಮಾನಗಳು ನಿಂತಿಲ್ಲ.

ಅಂತಹ ಅರಿವು ಚಿಂತನಧಾರೆಯ, ಸ್ವಾಭಿಮಾನದ ಪಯಣದ ನಾಯಕ, ಮೂಕನಾಯಕ, ಬಹಿಷ್ಕೃತ ಭಾರತ, ಜನತಾ ಎಂದು ಆಲೋಚಿಸಿದ ವಿಮೋಚಕರಾದ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಇಡೀ ಜಗತ್ತೇ ಗೌರವಿಸುತ್ತಿರುವ ಈ ಸಂದರ್ಭದಲ್ಲಿ ಅವರ 125ನೆಯ ಜಯಂತ್ಯುತ್ಸವವನ್ನು ಇನ್ನಷ್ಟು ಅರ್ಥಪೂರ್ಣ ಗೊಳಿಸಬೇಕೆನ್ನುವ ಉದ್ದೇಶದಿಂದ ಮೂರು ದಿನಗಳ ಕಾಲ ನಾವೆಲ್ಲರೂ ಒಂದೆಡೆ ಕೂಡಿ **'ಕನ್ನಡ ದಲಿತ ಸಾಹಿತ್ಯ ತೊಟ್ಟ ರೂಪ ಇಟ್ಟ ಹೆಜ್ಜೆ'** ಗಳ ಕುರಿತು ಪುನರ್ ಮನನ ಮಾಡಿಕೊಳ್ಳುವ, ಚಿಂತಿಸುವ, ಆ ಮೂಲಕ ಹೆಚ್ಚಿನ ಅರಿವನ್ನು ಆಗುಮಾಡಿಕೊಳ್ಳುವ ಅಗತ್ಯವಿದೆ ಎಂದು ನಾನು ಭಾವಿಸಿದ್ದೇನೆ. **ಬನ್ನಿ ನಾವೆಲ್ಲ ಹೋರಾಟದ ಸಾಗರಕ್ಕೆ ಉಪನದಿಗಳಾಗಿ ಸೇರೋಣ.....**

**ಪ್ರೊ. ಎಚ್.ಟಿ. ಪೋತೆ**



ದಿನಾಂಕ.21.01.2017 ಸಮಯ. 10.30ಗಂಟೆಗೆ

# ಕನ್ನಡ ದಲಿತ ಸಾಹಿತ್ಯ ರಾಷ್ಟ್ರೀಯ ವಿಚಾರ ಸಂಕಿರಣ

## ಉಧ್ಘಾಟನಾ ಸಮಾರಂಭ

ಉದ್ಘಾಟನೆ

**ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಜಿ**

ಕಾಂಗ್ರೆಸ್ ಸಂಸದೀಯ ನಾಯಕರು, ನವದೆಹಲಿ

ಚಿತ್ರಕಲಾ ಪ್ರದರ್ಶನ ಮತ್ತು ಪುಸ್ತಕ ಮಾರಾಟ ಮೇಳ ಉದ್ಘಾಟನೆ

**ಪ್ರೊ. ಮಲ್ಲೇಪುರಂ. ಜಿ ವೆಂಕಟೇಶ**

ವಿಶ್ರಾಂತ ಕುಲಪತಿಗಳು ಹಾಗೂ ಖ್ಯಾತ ಚಿಂತಕರು ಬೆಂಗಳೂರು

ಮುಖ್ಯ ಅತಿಥಿಗಳು

**ಪ್ರೊ. ಅರವಿಂದ ಮಾಲಗತ್ತಿ**

ಖ್ಯಾತ ಸಾಹಿತಿಗಳು, ಮೈಸೂರು

ಅಧ್ಯಕ್ಷತೆ

**ಪ್ರೊ. ಎಸ್.ಆರ್. ನಿರಂಜನ**

ಕುಲಪತಿಗಳು

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೌರವ ಉಪಸ್ಥಿತಿ

**ಶ್ರೀ ನಾರಾಯಣರಾವ್ ಕಾಳೆ**

ಸಿಂಡಿಕೇಟ ಸದಸ್ಯರು

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**ಶ್ರೀ ಸತೀಶ್ ಅಳ್ಳೊಳ್ಳಿ**

ವಿದ್ಯಾವಿಷಯಕ ಪರಿಷತ್ ಸದಸ್ಯರು

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಆಶಯ ನುಡಿ

**ಪ್ರೊ. ಎಚ್.ಟಿ. ಪೋತೆ**

ಅಧ್ಯಕ್ಷರು

ಕನ್ನಡ ಅಧ್ಯಯನ ಸಂಸ್ಥೆ

ನಿರ್ದೇಶಕರು, ಪ್ರಸಾರಾಂಗ

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ನಿರ್ವಹಣೆ

**ಡಾ. ಎಂ.ಬಿ. ಕಟ್ಟಿ**

**ಡಾ. ಅರುಣಕುಮಾರ ಕುರ್ಣೆ**

ವಂದನಾರ್ಪಣೆ

**ಡಾ. ಚಿದಾನಂದ ಸಿಂಧೆ**



## ವಿಶೇಷ ಉಪನ್ಯಾಸಗಳು

ದಿನಾಂಕ : 21–01–2017 ಸಮಯ.02.00 ಗಂಟೆಗೆ

ವಿಷಯ : ಕನ್ನಡ ದಲಿತ ಸಾಹಿತ್ಯ : ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರೇರಣೆ, ಪ್ರಭಾವ

ಉಪನ್ಯಾಸಕರು : ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಹಂಪಿ

ವಿಷಯ : ಬಿ. ಶ್ಯಾಮಸುಂದರ್ ಜೀವನ–ಸಾಹಿತ್ಯ ಸಾಧನೆ
ಉಪನ್ಯಾಸಕರು : ಡಾ. ಸೂರ್ಯಕಾಂತ ಸುಜ್ಯಾತ್, ಕಲಬುರಗಿ

ನಿರ್ವಹಣೆ : ಡಾ. ಚೈತೇನ ಪ್ರಸಾದ
ವಂದನಾರ್ಪಣೆ : ಶ್ರೀ ಪೀರಪ್ಪ ಸಜ್ಜನ

## ಕವಿಗೋಷ್ಠಿ

ಸಮಯ.03.00 ಗಂಟೆಗೆ

ಉದ್ಘಾಟನೆ : ಶ್ರೀ ಸುಬ್ಬು ಹೊಲೆಯಾರ್
ಖ್ಯಾತ ಕವಿಗಳು, ಬೆಂಗಳೂರು
ಅಧ್ಯಕ್ಷತೆ : ಡಾ. ಚಂದ್ರಕಿರಣ ಎಸ್. ಕುಳವಾಡಿ, ಮೈಸೂರು

### ಭಾಗವಹಿಸುವ ಕವಿಗಳು

ಸತ್ಯಮಂಗಲ ಮಹಾದೇವ, ಬೆಂಗಳೂರು
ರಂಗನಾಥ ಆರನಕಟ್ಟೆ, ಚಿತ್ರದುರ್ಗ
ರೇಣುಕಾ ಹೆಳವರ, ಕಲಬುರಗಿ
ಸುರೇಶ ಬಡಿಗೇರ, ಕಲಬುರಗಿ
ಪ್ರಭುಲಿಂಗ ನೀಲೂರೆ, ಕಲಬುರಗಿ
ಬಿ.ಪೀರಭಾಷಾ, ಬಳ್ಳಾರಿ

ಪರವಿನ ಸುಲ್ತಾನಾ, ಕಲಬುರಗಿ
ವೀರಣ್ಣ ಮಡಿವಾಳರ್, ಬೆಳಗಾವಿ
ಸುಜಾತಾ ಚಲವಾದಿ, ವಿಜಯಪುರ
ರಾಜಶೇಖರ್ ಮಾಂಗ, ಕಲಬುರಗಿ
ವಿನಾಯಕ ಕಮತದ, ಗದಗ
ಮರಿಯಪ್ಪ ನಾಟೇಕರ್, ಯಾದಗಿರ

ನಿರ್ವಹಣೆ
ಡಾ. ಶಿವಪುತ್ರ ಮಾವಿನ
ವಂದನಾರ್ಪಣೆ
ಶ್ರೀ ವಿಶಾಲ ಸಜ್ಜನ

**ದಿನಾಂಕ.22.01.2017 ಸಮಯ.9. ಗಂಟೆಗೆ**

ಗೋಷ್ಠಿ–ಒಂದು

**ಕನ್ನಡ ದಲಿತ ಸಾಹಿತ್ಯ : 1970 ರಿಂದ 1995**

ಕಾವ್ಯ : ಡಾ. ಎಚ್. ಎಲ್. ಪುಷ್ಪ, ಬೆಂಗಳೂರು

ಕಥನ ಸಾಹಿತ್ಯ : ಡಾ. ವೈ.ಬಿ. ಹಿಮ್ಮಡಿ, ಬೆಳಗಾವಿ

ವಿಚಾರ/ವಿಮರ್ಶೆ : ಡಾ. ಶಿವಾನಂದ ಕೆಳಗಿನಮನಿ, ಶಿವಮೊಗ್ಗ

ಅಧ್ಯಕ್ಷರು : ಡಾ. ಬಿ.ಬಿ. ಪೂಜಾರ, ಸೋಲಾಪುರ

ನಿರ್ವಹಣೆ : ಕೆ. ಕೃಷ್ಣಪ್ಪ

ವಂದನಾರ್ಪಣೆ : ಪ್ರೇಮಾಂಜಲಿ



ಗೋಷ್ಠಿ–ಎರಡು ಸಮಯ. 11.00 ಗಂಟೆಗೆ

**ಕನ್ನಡ ದಲಿತ ಸಾಹಿತ್ಯ : 1995 ರಿಂದ 2015**

ಕಾವ್ಯ : ಡಾ. ಟಿ. ಯಲ್ಲಪ್ಪ, ಬೆಂಗಳೂರು

ಕಥೆ : ಡಾ. ವೆಂಕಟಗಿರಿ ದಳವಾಯಿ, ಧಾರವಾಡ

ವಿಚಾರ/ ವಿಮರ್ಶೆ: ಡಾ. ಎಸ್. ನರೇಂದ್ರಕುಮಾರ್, ಮೈಸೂರು

ಅಧ್ಯಕ್ಷತೆ : ಡಾ. ತಮಿಳ್ ಸೆಲ್ವಿ, ಮದ್ರಾಸ, ತಮಿಳನಾಡು

ನಿರ್ವಹಣೆ : ಡಾ. ಹಣಮಂತ ಮೇಲಕೇರಿ

ವಂದನಾರ್ಪಣೆ : ಡಾ. ಶೇಖರ್ ಸಲಗರ

ಗೋಷ್ಠಿ–ಮೂರು ಸಮಯ. 2.00 ಗಂಟೆಗೆ

**ಕನ್ನಡ ದಲಿತ ಸಾಹಿತ್ಯ : 1995 ರಿಂದ 2015**

ಸಂಶೋಧನೆ : ಡಾ. ಅಪ್ಪಗೆರೆ ಸೋಮಶೇಖರ್, ಕಲಬುರಗಿ

ನಾಟಕ: ಡಾ. ಗವಿಸಿದ್ದಪ್ಪ ಪಾಟೀಲ, ಕೊಪ್ಪಳ

ದಲಿತ ಮಹಿಳಾ ಸಾಹಿತಿಗಳು : ಡಾ. ಎಂ.ಬಿ. ಕಟ್ಟಿ, ಕಲಬುರಗಿ

ಅಧ್ಯಕ್ಷತೆ : ಡಾ. ಕೆ. ಶಾರದಾ, ಕುಪ್ಪಂ, ಆಂಧ್ರಪ್ರದೇಶ

ನಿರ್ವಹಣೆ : ಡಾ. ಸಿದ್ದಣ್ಣ ಕೊಳ್ಳಿ

ವಂದನಾರ್ಪಣೆ : ಡಾ. ಪ್ರಕಾಶ ಬಡಿಗೇರ



**ವಿಶೇಷ ಉಪನ್ಯಾಸ** ಸಮಯ 4.00 ಗಂಟೆಗೆ

**ಕನ್ನಡ ಚಲನಚಿತ್ರಗಳು : ದಲಿತ ಸಂವೇದನೆ**

ಉಪನ್ಯಾಸಕರು : ಡಾ. ಸಿದ್ರಾಮ ಕಾರಣಿಕ, ಧಾರವಾಡ

**ದಿನಾಂಕ.23.01.2017 ಸಮಯ. 09.00 ಗಂಟೆಗೆ**

ಗೋಷ್ಠಿ–ನಾಲ್ಕು

**ಉತ್ತರ ಕರ್ನಾಟಕದ ದಲಿತ ಸಾಹಿತ್ಯ**

ಕಾವ್ಯ : ಡಾ. ಶ್ರೀಶೈಲ ನಾಗರಾಳ, ಕಲಬುರಗಿ

ಕಥೆ : ಡಾ. ಮುದೇನೂರ ನಿಂಗಪ್ಪ, ಧಾರವಾಡ

ಕಾದಂಬರಿ : ಡಾ. ದಸ್ತಗೀರಸಾಬ ದಿನ್ನಿ, ರಾಯಚೂರ

ಅಧ್ಯಕ್ಷತೆ : ಡಾ. ಹೊನ್ನುಸಿದ್ಧಾರ್ಥ ಸಿ.ಬಿ., ಬೆಂಗಳೂರು

ನಿರ್ವಹಣೆ : ಡಾ. ದಿಲೀಪಕುಮಾರ ನವಲೆ

ವಂದನಾರ್ಪಣೆ : ಡಾ. ಶಂಭುನಾಥ ನಡಗೇರಿ

**ದಿನಾಂಕ : 23-01-2017 ಸಮಯ. 11.30 ಗಂಟೆಗೆ**

ಗೋಷ್ಠಿ-ಐದು

## ಉತ್ತರ ಕರ್ನಾಟಕದ ದಲಿತ ಸಾಹಿತ್ಯ

ವಿಚಾರ/ವಿಮರ್ಶೆ : ಡಾ. ಎಂ. ನಾಗರಾಜ, ವಿಜಯಪುರ

ನಾಟಕ : ಡಾ. ಅಮೃತಾ ಕಟಕೆ, ಕಲಬುರಗಿ

ಅನುವಾದ : ಡಾ. ಜಯದೇವಿ ಗಾಯಕವಾಡ, ಬೀದರ

ಅಧ್ಯಕ್ಷತೆ : ಡಾ. ಚಲುವರಾಜು, ಹಂಪಿ

ನಿರ್ವಹಣೆ : ಡಾ. ಅನಿಲಕುಮಾರ್ ಟೆಂಗಳಿ

ವಂದನಾರ್ಪಣೆ : ಡಾ. ಮಲ್ಲಪ್ಪ ಚಲವಾದಿ

**ವಿಶೇಷ ಉಪನ್ಯಾಸಗಳು ಸಮಯ. 2.00 ಗಂಟೆಗೆ**



ವಿಷಯ : **ಕನ್ನಡ ದಲಿತ ಆತ್ಮ ಕಥೆಗಳು**

ಉಪನ್ಯಾಸಕರು : ಡಾ. ವಡ್ಡಗೇರೆ ನಾಗರಾಜಯ್ಯ, ಬೆಂಗಳೂರು

ವಿಷಯ : **ದೃಶ್ಯಕಲೆ-ದಲಿತ ಸಂವೇದನೆ**

ಉಪನ್ಯಾಸಕರು : ಡಾ. ಪರಶುರಾಮ ಪಿ, ಕಲಬುರಗಿ

ವಿಷಯ : **ದಲಿತ ನೆಲೆಯ ಜೀವನ ಚರಿತ್ರೆಗಳು**

ಉಪನ್ಯಾಸಕರು : ಡಾ. ಚಿತ್ತಯ್ಯ ಪೂಜಾರ, ಬೆಂಗಳೂರು

ಅಧ್ಯಕ್ಷತೆ : ಡಾ.ಬಿ.ಎಂ.ಪಟ್ಟಯ್ಯ, ಹಂಪಿ

ನಿರ್ವಹಣೆ : ಡಾ. ಸುನೀಲಕುಮಾರ ಕಾಂಬಳೆ

ವಂದನಾರ್ಪಣೆ : ವಿಜಯಕುಮಾರ ಬೀಳಗಿ

## ಸಮಾರೋಪ ಸಮಾರಂಭ

ಸಮಯ. 3.30 ಗಂಟೆಗೆ

ಸಮಾರೋಪ ಭಾಷಣ : ಡಾ. ಎಲ್. ಹನುಮಂತಯ್ಯ
ಖ್ಯಾತ ಸಾಹಿತಿಗಳು, ಬೆಂಗಳೂರು

ಅಧ್ಯಕ್ಷತೆ : ಪ್ರೊ. ಎಸ್.ಆರ್. ನಿರಂಜನ
ಕುಲಪತಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಮುಖ್ಯ ಅತಿಥಿಗಳು : ಡಾ. ಅರ್ಜುನ ಗೊಳಸಂಗಿ
ಅಧ್ಯಕ್ಷರು, ಕರ್ನಾಟಕ ದಲಿತ ಸಾಹಿತ್ಯ ಪರಿಷತ್ತು, ಗದಗ

ಶ್ರೀ ಈಶ್ವರ ಇಂಗನ್
ಸಿಂಡಿಕೇಟ್ ಸದಸ್ಯರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಶ್ರೀ ನಾಗೇಶ ಕೊಳ್ಳಿ
ವಿದ್ಯಾವಿಷಯಕ ಪರಿಷತ್ ಸದಸ್ಯರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಉಪಸ್ಥಿತಿ : ಪ್ರೊ. ಎಚ್.ಟಿ. ಪೋತೆ
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ ಹಾಗೂ ನಿರ್ದೇಶಕರು, ಪ್ರಸಾರಾಂಗ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ನಿರ್ವಹಣೆ : ಡಾ. ಶರಣಪ್ಪ ಕವಡೆ

ವಂದನಾರ್ಪಣೆ : ರಾಜಕುಮಾರ ಮಾಳಗೆ

**ಪ್ರೊ. ಎಚ್.ಟಿ. ಪೋತೆ**
ಅಧ್ಯಕ್ಷರು. ಕನ್ನಡ ಅಧ್ಯಯನ ಸಂಸ್ಥೆ
ನಿರ್ದೇಶಕರು. ಪ್ರಸಾರಾಂಗ
ಗುಲಬರ್ಗಾ ವಿಶ್ವವಿದ್ಯಾಲಯ. ಕಲಬುರಗಿ

**ಪ್ರೊ. ಅಗಸರ್ ದಯಾನಂದ**
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ.
ಕಲಬುರಗಿ